ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ:ದ:ನ್ಯಾ:ದಂ.,ರವರು, ಕಡೂರು
C.C. No.2367/2024. PW 1.
ದಿನಾಂಕ:**18.11.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು

<u>ಪಾಟೀ ಸವಾಲು:</u>- ಸಿ ಓ ವೈ ವಕೀಲರಿಂದ:-

ನನಗೆ ಅಡಿಕೆ ಮತ್ತು ತೆಂಗು ತೋಟ ಇದೆ ಹಾಗೂ ನಾನು ವೈನ್ ಸ್ಟೋರ್ ಹೊಂದಿರುತ್ತೇನೆ. ನನಗೆ 3 ಜನ ಮಕ್ಕಳು, ಅವರುಗಳೆಂದರೆ ಅಜಯ್‌ದೇಸಾ, ಅವಿನ್ ದೇಸಾ, ಆಶ್ರಿತಾದೇಸಾ. ನನ್ನ ವೈನ್ ಸ್ಟೋರ್ ನಾನೇ ನಡೆಸುತ್ತೇನೆ, ಮಗ ಅಜಯ್ ಅಪರೂಪಕ್ಕೆ ಮಾತ್ರ ನೋಡಿಕೊಳ್ಳುತ್ತಾನೆ. ನಾನು ಕಡೂರಿನ ಕೋಟಕ್ ಬ್ಯಾಂಕಿನಲ್ಲಿ ಖಾತೆ ಹೊಂದಿದ್ದೇನೆ. ನನ್ನ ಮಗ ಅಜಯ್ ಕಡೂರಿನ ಕೋಟಕ್ ಮತ್ತು ಕರ್ನಾಟಕ ಬ್ಯಾಂಕಿನಲ್ಲಿ ಖಾತೆ ಹೊಂದಿರುತ್ತಾನೆ. ಆರೋಪಿ ನನಗೆ ಕಳೆದ 8 ವರ್ಷದಿಂದ ಪರಿಚಯ. ಆರೋಪಿಯ ಊರು ನಮ್ಮ ಊರಿನಿಂದ ಸುಮಾರು 2-3 ಕಿ ಮೀ ದೂರದಲ್ಲಿದೆ. ನಾನು ದಿನಕ್ಕೆ ಎಷ್ಟು ಲೀ ಮದ್ಯಮಾರಾಟ ಮಾಡುತ್ತೇನೆ ಎಂದು ನನಗೆ ಗೊತ್ತಿಲ್ಲ, ಆ ಬಗ್ಗೆ ನನ್ನ ಅಂಗಡಿಯ ಕ್ಯಾಶಿಯರ್ ಗೆ ಗೊತ್ತಿದೆ. ಆರೋಪಿಯು ಆತನ ಊರಾದ ನಂದಿಪುರದಲ್ಲಿ ಮದ್ಯಮಾರಾಟ ಮಾಡುತ್ತಾರೆ ನನಗೆ ಗೊತ್ತಿಲ್ಲ. ನನ್ನ ವೈನ್ ಸ್ಟೋರಿನಿಂದ ಆರೋಪಿಗೆ ಮದ್ಯ ಮಾರಾಟ ಮಾಡುತ್ತಿದ್ದೆವು ಎಂದರೆ ನನಗೆ ಗೊತ್ತಿಲ್ಲ.

ಆರೋಪಿಗೆ ರೂ.8 ಲಕ್ಷವನ್ನು ಒಂದೇ ಬಾರಿಗೆ ನಗದುರೂಪದಲ್ಲಿ ನೀಡಿರುತ್ತೇನೆ. ಈ ನಡುವೆ ಆರೋಪಿ ಮತ್ತು ನನ್ನ ಮಗನ ನಡುವೆ ಹಣದ ವರ್ಗಾವಣೆ ಆಗಿರುತ್ತದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಆರೋಪಿಯ ಮೂಲಕ ನನ್ನ ಮಗ ಹಳ್ಳಿಗಳಲ್ಲಿ ಮದ್ಯ ಮಾರಾಟ ಮಾಡಿಸುತ್ತಿದ್ದ, ಆರೋಪಿ ಮದ್ಯ ಮಾರಾಟದಿಂದ ಬಂದ ಹಣವನ್ನು ನನ್ನ ಮಗ ಅಜಯ್ ನ ಖಾತೆಗೆ ವರ್ಗಾವಣೆ ಮಾಡುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ. ಈ ವ್ಯವಹಾರದಲ್ಲಿ ಹಳ್ಳಿಗಳಿಗೆ ಮದ್ಯ ಮಾರಾಟ ಮಾಡಿ ಹಣ ಕೊಡಬೇಕಾಗಿದ್ದರಿಂದ ಅದರ ಭದ್ರತೆಗೆಂದು ನನ್ನ ಮಗ ಅಜಯ್ ಆರೋಪಿಯಿಂದ 1 ಚೆಕ್ ಪಡೆದಿದ್ದ ಎಂದರೆ ಸರಿಯಲ್ಲ.

ದಿ:25.10.2023 ರಂದು ನಾನು ಆರೋಪಿಗೆ ಹಣ ನೀಡಿರುತ್ತೇನೆ. ಇದಾದ 7 ತಿಂಗಳ ನಂತರ ಆರೋಪಿಯ ಬಳಿ ನಾನು ಹಣ ಕೇಳಿದಾಗ, ಆರೋಪಿಯು ನನಗೆ ಕರ್ನಾಟಕ ಬ್ಯಾಂಕಿನ ಚೆಕ್ ಸಂಖ್ಯೆ 790266 ರ ಚೆಕ್ ಅನ್ನು ನೀಡಿರುತ್ತಾನೆ.

ನಾನು ಆರೋಪಿಗೆ ನೀಡಿದ 8 ಲಕ್ಷ ಹಣವನ್ನು ನಾನು ತೋಟದ ಕೆಲಸಕ್ಕೆ ಹಾಗೂ ಅಂಗಡಿಯ ವ್ಯಾಪಾರಕ್ಕೆಂದು ಇಟ್ಟುಕೊಂಡಿದ್ದ ನಗದು ಹಣವನ್ನು ಆರೋಪಿಗೆ ನೀಡಿರುತ್ತೇನೆ. ನಾನು ಅಡಿಕೆ ಚೇಣಿ ನೀಡಿದ್ದರಿಂದ ಸದರಿ 8 ಲಕ್ಷ ಹಣ ಬಂದಿರುತ್ತದೆ. ಈ ವಿಚಾರವನ್ನು ನಾನು ದೂರಿನಲ್ಲಿ ಹೇಳಿರುವುದಿಲ್ಲ.

ದಿ:19.06.2024 ರಂದು ಆರೋಪಿ ನೀಡಿದ ಚೆಕ್ ಅನ್ನು ನಗದೀಕರಣಕ್ಕೆ ಸಲ್ಲಿಸಿರುತ್ತೇನೆ. ನಾನು ಜುಲೈ ತಿಂಗಳಿನಲ್ಲಿ ಚೆಕ್ ಪಡೆದಿರುತ್ತೇನೆ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು.